೭ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ನಂಜನಗೂಡು

ಸಿಸಿ ನಂಬರ್:46/2020

ಫಿರ್ಯಾದಿ : ಲಕ್ಷ್ಮಿ ಕೋ ಲೇ:ಮಂಟನಾಯ್ಕ, 33 ವರ್ಷ,
ಕಲ್ಲಹಳ್ಳಿ ಗ್ರಾಮ, ಕಸಬಾ ಹೋಬಳಿ,
ನಂಜನಗೂಡು ತಾಲ್ಲೂಕು.

ವಿರುದ್ಧ

ಆರೋಪಿ : ರಮೇಶ್ ಡಿ ಆರ್ ಬಿನ್ ಲೇ:ರಾಮದಾಸನಾಯ್ಕ, 45 ವರ್ಷ,
ನಾಯಕರ ಬೀದಿ, ದೇಬೂರು ಗ್ರಾಮ,
ಕಸಬಾ ಹೋಬಳಿ, ನಂಜನಗೂಡು ತಾಲ್ಲೂಕು.

: ಆರೋಪಣೆ :

ಶ್ರೀಮತಿ ಶಶಿಕಲಾ ಜಿ, ಬಿ.ಎ, ಎಲ್‌ಎಲ್‌ಬಿ ೭ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ನಂಜನಗೂಡು, ಆದ ನಾನು ನಿಮ್ಮ ಮೇಲೆ ಈ ಕೆಳಕಂಡ ಆಪಾದನೆಯನ್ನು ಹೊರೆಸುವುದೇನೆಂದರೇ:

ಮೇಲ್ಕಂಡ ಆರೋಪಿಯಾದ ನೀವು ಮತ್ತು ಫಿರ್ಯಾದುದಾರರು ಸ್ನೇಹಿತರು ಮತ್ತು ಪರಿಚಯಸ್ಥರಾಗಿದ್ದು, ಸದರಿ ಪರಿಚಯದ ಆಧಾರದ ಮೇಲೆ ಆರೋಪಿಯಾದ ನೀವು ನಿಮ್ಮ ದರದು ನಿಮಿತ್ತ ಅಂದರೆ ಮುಬ್ಬೆ ಸಾಲ ತೀರಿಸುವ ಸಲುವಾಗಿ ಹಣದ ಅವಶ್ಯಕತೆ ಇದೆ ಎಂದು ಫಿರ್ಯಾದುದಾರರಿಂದ ದಿ:20.07.2019 ರಂದು ರೂ.4,00,000/-ಗಳನ್ನು ಮುಬ್ಬೆ ಸಾಲವಾಗಿ ಪಡೆದುಕೊಂಡಿರುತ್ತೀರಿ. ಸದರಿ ಮೊಬಲಗನ್ನು ಆರೋಪಿಯಾದ ನೀವು ವಾಪಸ್ಸು ಕೊಡುವುದಾಗಿ ಒಪ್ಪಿರುತ್ತೀರಿ, ಸದರಿ ಮೊಬಲಗಿನ ಮರುಪಾವತಿಗಾಗಿ ಆರೋಪಿಯಾದ ನೀವು ಅದೇ ದಿನ ಒಂದು ಪೋಸ್ಟ್ ಡೇಟೇಡ್ ಚೆಕ್ ನಂ:468012 ಗೆ ರೂ.4,00,000/- ಗಳನ್ನು ಕಾವೇರಿ ಕಲ್ಪತರು ಗ್ರಾಮೀಣಾ ಬ್ಯಾಂಕ್, ಆಳಗಂಚಿ ಶಾಖೆ, ನಂಜನಗೂಡು, ದಿನಾಂಕ:04.10.2019 ಎಂದು ನಮೂದಿಸಿ ಫಿರ್ಯಾದುದಾರರ ಹೆಸರಿಗೆ ನೀಡಿದ್ದು, ತದನಂತರ ಪಿರ್ಯಾದುದಾರರು ಸದರಿ ಚೆಕ್ಕುಗಳನ್ನು ನಗದೀಕರಿಸಿಕೊಳ್ಳಲು ಉಳಿತಾಯ ಖಾತೆಯಿರುವ ಬ್ಯಾಂಕ್ ಆಫ್ ಬರೋಡಾ, ನಂಜನಗೂಡು ಶಾಖೆಯ ಬ್ಯಾಂಕಿನ ಮೂಲಕ ಹಾಜರುಪಡಿಸಿದಾಗ ಸದರಿ ಬ್ಯಾಂಕಿನವರು "Signature Differs' ಎಂಬ ಹಿಂಬರಹದೊಂದಿಗೆ ದಿ:16.10.2019 ರಂದು ನಗಧೀಕೃತಗೊಳ್ಳದೆ

16/1/23

ತಿರಸ್ಕೃತಗೊಂಡಿರುತ್ತದೆ ಎಂದು ತಿಳಿಸಿರುತ್ತಾರೆ. ಅನಂತರ ಪಿರ್ಯಾದುದಾರರು ಮೇಲ್ಕಂಡ ವಿಷಯವನ್ನು ನಮೂದಿಸಿ ವಕೀಲರ ಮೂಲಕ ನಿಮಗೆ ದಿ.31.10.2019 ರಂದು ನೋಟಿಸನ್ನು ಕಳುಹಿಸಿದ್ದು, ಸದರಿ ನೋಟೀಸ್ ಆರೋಪಿಯಾದ ನಿಮಗೆ ಖುದ್ದು ಜಾರಿಯಾಗಿದ್ದು, ಈ ಸಂಬಂಧ ನೀವು ಯಾವುದೇ ಕ್ರಮ ಕೈಗೊಳ್ಳದೇ ಇದ್ದುದರಿಂದ ಆರೋಪಿಯಾದ ನೀವು ವರ್ಗಾವಣೆ ಲಿಖಿತ ಅಧಿನಿಯಮ ಕಲಂ 138 ರಡಿಯಲ್ಲಿ ದಂಡನೀಯವಾದ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುವಿರೆಂದು ನಿಮ್ಮ ಮೇಲೆ ಅಪಾದಿಸಲಾಗಿದೆ.

ಪ್ರಶ್ನೆ-1 : ಈಗ ಓದಿ ಹೇಳಿದ ನಿಮ್ಮ ಮೇಲಿನ ಆಪಾದನೆಯನ್ನು ಕೇಳಿದ್ದೀರಾ?

ಉತ್ತರ : ಹೌದು

ಪ್ರಶ್ನೆ-2 : ಸದರೀ ಆಪಾದನೆಗಳನ್ನು ಒಪ್ಪಿಕೊಳ್ಳುವೆಯೋ? ಅಥವಾ ಪ್ರತಿರಕ್ಷೆ ಮಾಡಿಕೊಳ್ಳುವಿರೋ ?

ಉತ್ತರ : ತಪ್ಪು ಮಾಡಿಲ್ಲ. ಅಮಾಯಕನಾಗಿದ್ದೇನೆ

(ಮೇಲ್ಕಂಡ ಆಪಾದನೆಯನ್ನು ಆರೋಪಿತನಿಗೆ ಕನ್ನಡದಲ್ಲಿ ಓದಿ ಹೇಳಿ ನಂತರ ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನೊಳಗೊಂಡಿದೆಯೆಂದು ದಿನಾಂಕ 16.01.2023 ರಂದು ತೆರೆದ ನ್ಯಾಯಾಲಯದಲ್ಲಿ ದೃಢೀಕರಿಸುತ್ತೇನೆ).

2ನೇ ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
ನಂಜನಗೂಡು